# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ

## ಸಿ. ಸಿ. ನಂಃ 193/2020

ಪಿ.ಡಬ್ಲ್ಯೂ- 5
ಸಿ.ಡಬ್ಲ್ಯೂ- 10

ಹೆಸರು ಃ- ಮಂಜುನಾಥ ಮಾಯನ್ನವರ

ತಂದೆ / ಗಂಡನ ಹೆಸರು ಃ- ರಾಮಪ್ಪ

ವಯಾ ಃ- 44 ವರ್ಷ

ಉದ್ಯೋಗ ಃ- ಒಕ್ಕಲುತನ

ವಾಸಸ್ಥಳ ಃ- ಅಣ್ಣಿಗೇರಿ

ಸತ್ಯ ಪ್ರತಿಜ್ಞೆ ಮೇರೆಗೆ ಃ- ದಿನಾಂಕಃ 27-01-2026

*ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ*

1) ಆರೋಪಿತರ ಪರಿಚಯವಿದೆ. (ಈ ಹಂತದಲ್ಲಿ ನ್ಯಾಯಾಲಯದದ ಮುಂದೆ ಆರೋಪಿತರು ಗೈರು ಹಾಜರಿದ್ದು, ಆರೋಪಿತರ ಗುರುತಿಗೆ ಯಾವುದೇ ತಕರಾರು ಇಲ್ಲಾ ಎಂದು ಅರ್ಜಿ ಸಲ್ಲಿಸಿರುತ್ತಾರೆ). ಚಾಸಾ-1 ಹಾಗೂ ಚಾಸಾ-11 ರವರ ಪರಿಚಯವಿದೆ.

2) ಸುಮಾರು ವರ್ಷಗಳ ಹಿಂದೆ ಶಿಶುವಿನಹಳ್ಳಿ ಗ್ರಾಮದಲ್ಲಿ ನಾನು ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ನಿಪಿ-6, ನಿಪಿ-7 ಹಾಗೂ ನಿಪಿ-9 ರ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.6(ಸಿ), ನಿ.ಪಿ.7(ಬಿ), ಹಾಗೂ ನಿ.ಪಿ.9(ಸಿ) ಎಂದು ಗುರುತಿಸಲಾಯಿತು. ನಿಪಿ-8 ಹಾಗೂ ನಿಪಿ-10 ರಲ್ಲಿ ನಾನು ಇರುತ್ತೇನೆ.

*(*ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು*.)*

<u>ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ -</u>

1) ದಿನಾಂಕ 14-01-2020 ರಂದು ಸಂಜೆ ಸುಮಾರು 06-00 ಗಂಟೆಗೆ 1 ನೇ ಆರೋಪಿತನು ತನ್ನ ಕೆ.ಎಸ.ಆರ.ಟಿ.ಸಿ. ಬಸ್ಸ ಸಂಖ್ಯೆ ಕೆಎ 26 ಎಪ 877 ನೇದ್ದನ್ನು ಹುಬ್ಬಳ್ಳಿ ಗದಗ ಮಾರ್ಗವಾಗಿ ಅತೀ ವೇಗದಿಂದ, ಅಲಕ್ಷತನದಿಂದ ಚಲಾಯಿಸಿಕೊಂಡು ಬಂದು ಆತನ ಎದುರಿಗೆ ಹೋಗುತ್ತಿದ್ದ ವಾಹನವನ್ನು ಓವರಟೇಕ ಮಾಡಿ ಬಸ್ಸನ್ನು ರಸ್ತೆಯ ತೀರ ಬಲಬದಿಗೆ ತೆಗೆದುಕೊಂಡು ಎದುರುಗಡೆಯಿಂದ ಬರುತ್ತಿದ್ದ ಶಿವರಾಜಕುಮಾರ ಕಾಳೆ ರವರ ಕೆಎ 61 ಹೆಚ್ 8798 ದ್ವಿಚಕ್ರ ವಾಹನಕ್ಕೆ ಗುದ್ದಿ ಅಪಘಾತ ಪಡಿಸಿ ಅವರು ಸ್ಥಳದಲ್ಲಿ ಮೃತ ಪಟ್ಟಿದ್ದು, ಚಾಸಾ-1 ರವರು ಅದರ ಬಗ್ಗೆ ಪ್ರಥಮ ಮಾಹಿತಿ ನೀಡಿದ್ದು, ದಿನಾಂಕ 15-01-2020 ರಂದು ಚಾಸಾ-1 ರವರ ನಿರ್ದೇಶನದ ಮೇರೆಗೆ ಘಟನಾ ಸ್ಥಳವಾದ ಹುಬ್ಬಳ್ಳಿ ರಸ್ತೆಯ ಸವಳ ಹಳ್ಳದ ಸೇತುವೆ ಬಳಿ ಬೆಳಗ್ಗೆ 10-30 ರಿಂದ 11-00 ಗಂಟೆಯ ವರೆಗೆ ನನ್ನ ಹಾಗೂ ಚಾಸಾ-11 ರವರ ಸಮಕ್ಷಮದಲ್ಲಿ ನಿಪಿ-6 ರ ಪಂಚನಾಮೆ ಮಾಡಿ, ನಿಪಿ-7 ರಂತೆ ಕಚ್ಚಾ ನಕಾಶೆ ಬಿಡಿಸಿ, ನಿಪಿ-8 ರಂತೆ ಚಾಯಾಚಿತ್ರ ತೆಗೆದಿರತ್ತಾರೆ ಅಂದರೆ ಸರಿಯಲ್ಲ.

2) ನಂತರ ಅದೇ ದಿನ ಅಪಘಾತಕ್ಕೆ ಒಳಗಾದ ಅಶೋಕ ಲೈಲ್ಯಾಂಡ ಕೆ ಎಸ್ ಆರ್ ಟಿ ಸಿ ಬಸ್ಸ ಸಂಖ್ಯೆ ಕೆಎ 26 ಎಪ್ 877 ಹಾಗೂ ಬಜಾಜ ಡಿಸ್ಕವರ ದ್ವಿಚಕ್ರ ವಾಹನ ಸಂಖ್ಯೆ ಕೆಎ 63 ಹೆಚ್ 8798 ನೇದ್ದರನ್ನು ಠಾಣೆಗೆ ತಂದು ಇರಿಸಿ ಅದರ ಪಂಚನಾಮೆಯನ್ನು ದಿನಾಂಕ 15-01-2020 ರಂದು ಮದ್ಯಾಹ್ನ 12-00 ರಿಂದ 12-45 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-11 ರವರ ಸಮಕ್ಷಮದಲ್ಲಿ ನಿಪಿ-9 ರಂತೆ ಮಾಡಿ ನಿಪಿ-10 ರಿಂದ ನಿಪಿ-12 ರಂತೆ ಚಾಯಾಚಿತ್ರ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಂಚನಾಮೆ ಕಾಲಕ್ಕೆ ಚಾಸಾ-1 ರವರು ವಾಹನವನ್ನು ಗುರುತು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3) ನಿಪಿ-11 ಚಾಯಾಚಿತ್ರದಲ್ಲಿ ಅಪಘಾತವಾದ ವಾಹನದ ಜಖಂಗಳನ್ನು ಹಾಗೂ ತೀವ್ರತೆಯನ್ನು ಪಂಚನಾಮೆಯಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಗಳನ್ನು ನಮ್ಮ ಹೇಳಿಕೆಯ ಮೇರೆಗೆ ಮಾಡಿದ್ದು, ಚಾಯಾಚಿತ್ರ ತೆಗೆದಿದ್ದು ಈಗ ನಾನು ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

*<u>ಪಾಟೀಸವಾಲು ಆರೋಪಿ ಪರ ಃ ಶ್ರೀ ಎಂ ಎಸ್ ಹೆಚ್ ವಕೀಲರಿಂದ ಃ</u>* **-**

ಪಾಟೀಸವಾಲು ಇಲ್ಲಾ ಎಂದು ನಿವೇದಿಸಿಕೊಂಡ ಕಾರಣ ಪಾಟೀಸವಾಲು ಇಲ್ಲಾ ಎಂದು ಪರಿಗಣಿಸಲಾಯಿತು.

<u>ಮರು ವಿಚಾರಣೆ ಃ ಇಲ್ಲಾ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**
**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**